# ಸುಂದರಿ ಬಿಪಾಸಾ



ಬಿಪಾಸಾ ಇನ್ನಷ್ಟು ತೆಳ್ಳಗಾಗಿದ್ದಾಳೆ. ಬಳುಕುವ ಬಳ್ಳಿಯಂತೆ ಓಡಾಡುತ್ತಿದ್ದಾಳೆ.

ಜತೆಗೇ ಆಕೆಯ ಸೌಂದರ್ಯ ಪ್ರಜ್ಞೆ ಇನ್ನಷ್ಟು ಎಚ್ಚೆತ್ತಿದೆ. ಕಳೆದ ವಾರ ಮುಂಬೈಯ ಡಾ.ಮೀನಾ ಮಖೀಜಾರ ಪಾರ್ಲರ್‌ಗೆ ಹೋಗಿ ಎರಡೂ ಕಿವಿಗಳ ಮೇಲ್ಭಾಗವನ್ನು ಚುಚ್ಚಿಸಿಕೊಂಡಿದ್ದಾಳೆ!

'ಎಷ್ಟು ನೋವಾಯ್ತು ಗೊತ್ತಾ..? ಈಗಲೂ ಕಿವಿ ಕೆಳಗೆ ಹಚ್ಚಿ ಮಲಗುವಾಗ ನೋವಾಗುತ್ತದೆ. ಆದರೂ ಒಂಥರಾ ಖುಷಿ. ಸದ್ಯಕ್ಕೆ ಎರಡು ಡೈಮಂಡ್ ಚುಕ್ಕಿಗಳನ್ನು ಕಿವಿಗೆ ಹಾಕಿಕೊಂಡಿದ್ದೇನೆ. ಗಾಯ ಪೂರ್ತಿ ಗುಣವಾದ ಮೇಲೆ ಉದ್ದನೆಯ ಡೈಮಂಡ್ ಝುಮ್ಕಿ ಹಾಕ್ಕೋಬೇಕು' ಎಂದು ಬಿಪಾಸಾ ಗೆಳತಿಯರ ಜತೆ ಹೇಳಿಕೊಂಡಿದ್ದಾಳೆ.

ಕಿವಿ ಚುಚ್ಚಿಸಿಕೊಳ್ಳುವ ಈ ಹುಚ್ಚು ಬಿಪಾಸಾಗೆ ಹಚ್ಚಿದವಳು ಆಕೆಯ ತಂಗಿ ವಿಜೇತಾ. ಆಕೆ ಇಂಗ್ಲೆಂಡಿನಲ್ಲಿ ನೆಲೆಸಿರುವವಳು. ಮೊನ್ನೆ ಮುಂಬೈಗೆ ಬಂದಾಗ ಆಕೆ ತನ್ನ ಎರಡೂ ಕಿವಿಗಳನ್ನು ನಾಲ್ಕು ಕಡೆ ಚುಚ್ಚಿಸಿಕೊಂಡದ್ದನ್ನು ಅಕ್ಕನಿಗೆ ತೋರಿಸಿ ತಲೆ ತಿಂದಿದ್ದಾಳೆ. 'ನೀನೂ ಚುಚ್ಚಿಸಿಕೋ. ತುಂಬ ಚೆಂದ ಕಾಣಿಸುತ್ತೀಯಾ..' ಎಂದು ಕಿವಿ ಕಚ್ಚಿದ್ದಾಳೆ. ಬಿಪಾಸಾ ಜೈ ಎಂದಿದ್ದಾಳೆ. 'ನಾನು ಏನು ಮಾಡಿದರೂ ಗೆಳೆಯ ಜಾನ್‌ಗೆ ಚಂದವೇ' ಎನ್ನೋದು ಬಿಪಾಸಾ ಒಗ್ಗರಣೆ.

ಕಿವಿ, ಮೂಗು, ಹೊಕ್ಕುಳ, ಎದೆ– ಹೀಗೆ ಎಲ್ಲೆಂದರಲ್ಲಿ ಚುಚ್ಚಿಸಿಕೊಳ್ಳೋದು ಹಾಲಿವುಡ್‌ನಲ್ಲೂ ಫ್ಯಾಷನ್ ಆಗಿದೆ. ಕ್ರಿಸ್ಟೀನಾ ಅಗುಲೆರ ಕಿವಿ, ಎದೆ, ಮೂಗು ಚುಚ್ಚಿಸಿಕೊಂಡಿದ್ದರೆ, ಬ್ರಿಟ್ನಿ ಸ್ಪಿಯರ್ಸ್ ಮತ್ತು ಜೆಸ್ಸಿಕಾ ಅಲ್ಬಾ ಈಗಾಗಲೆ ಕಿವಿ ಚುಚ್ಚಿಸಿಕೊಂಡಿದ್ದಾರೆ. ಮಿಲೀ ವೈರಸ್ ಮೂಗುತಿ ಸುಂದರಿಯಾಗಿದ್ದಾಳೆ. ಹಾಲಿವುಡ್ ಚಾಳಿ ಬಿಪಾಸಾ ಮೂಲಕ ಬಾಲಿವುಡ್‌ಗೂ ಎಂಟ್ರಿ ಕೊಟ್ಟಂತಾಗಿದೆ.

■ ಬಿಂದು

## ಹೃಶಿತಾ ಮದುವೆ

ಬಾಲಿವುಡ್‌ನಿಂದ ಇನ್ನೊಬ್ಬ ಸುಂದರಿಯ ಮದುವೆ ಸುದ್ದಿ ಬಂದಿದೆ. ಹೃಶಿತಾ ಭಟ್ ತನ್ನ ಹಳೇ ಗೆಳೆಯ ಶುಭಾಶಿಸ್ ಮುಖರ್ಜಿಯನ್ನು ಮದುವೆ ಆಗುತ್ತಾಳಂತೆ. ಆಸ್ಮಾ ಚಿತ್ರದಲ್ಲಿ ಜತೆಯಾಗಿ ನಟಿಸಿದ್ದ ಈ ಜೋಡಿಯ ಮಧ್ಯೆ ಆಗಲೇ ಪ್ರೀತಿ ಮೊಳೆತಿತ್ತು. ಈಗ ಮರವಾಗಿ ಬೆಳೆದಿದೆ. ಆದರೆ ಮದುವೆಗೆ ಇನ್ನೂ ನಾಲ್ಕು ತಿಂಗಳು ಕಾಯಬೇಕಂತೆ. ಶುಭಾಶಿಸ್ ನಟಿಸಿದ ಹೊಸ ಚಿತ್ರ 'ನಕ್ಷತ್ರ' ರಿಲೀಸ್ ಆದ ಮೇಲೆಯೇ ಮದುವೆಯಂತೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65